ಕರ್ನಾಟಕ ಪಂಚಾಯತ್ ಪರಿಷತ್

RNI No. : KARKAN 2011/41053
RNP/KA/BGS/2173/2012-2014
MAG /(2)/CR/PRB/187/10-11

# ಪರಿಷತ್ ಪತ್ರಿಕೆ

**PARISHATH PATRIKE**
*Kannada Monthly*

ರಾಜ್ಯದ ಪಂಚಾಯ್ತಿ ಪ್ರತಿನಿಧಿಗಳ ಮುಖವಾಣಿ

ಕನ್ನಡ ಮಾಸಿಕ

Volume : 2 | March 2014 | Pages : 16 | Rs : 10/- | Issue : 21
ಸಂಪುಟ : 2 | ಮಾರ್ಚ್ 2014 | ಪುಟಗಳು : 16 | ಬೆಲೆ : ರೂ.10/– | ಸಂಚಿಕೆ : 21



## ಮಹಿಳಾ ಸಬಲೀಕರಣದಲ್ಲಿ "ಸುಗ್ರಾಮ"

# ಮಹಿಳಾ ಸಬಲೀಕರಣದಲ್ಲಿ ಸುಗ್ರಾಮ

ಸುಗ್ರಾಮ–ಗ್ರಾಮ ಪಂಚಾಯತ್‌ಚುನಾಯಿತ ಮಹಿಳಾ ಪ್ರತಿನಿಧಿಗಳ ಸಂಘ –ಕರ್ನಾಟಕವನ್ನು, 2010ರಲ್ಲಿ ಸಂಘಗಳ ನೋಂದಣಿಕಾಯ್ದೆಯನ್ವಯ ನೋಂದಾಯಿಸಲ್ಪಡಲಾಗಿದ್ದು, ಕರ್ನಾಟಕದಗ್ರಾಮ ಪಂಚಾಯತಿಗಳ ಚುನಾಯಿತ ಮಹಿಳಾ ಪ್ರತಿನಿಧಿಗಳ ಹಕ್ಕು ಮತ್ತುಆಸಕ್ತಿಯನ್ನು ಪ್ರತಿನಿಧಿಸುತ್ತಿರುವಒಂದು ಸಂಘ. ಚುನಾಯಿತ ಮಹಿಳಾ ಪ್ರತಿನಿಧಿಗಳು, ಉತ್ತಮ ನೀತಿಗಳನ್ನು ವಕಾಲತ್ತು ಮಾಡುವುದು ಮತ್ತು ಬದಲಾವಣೆಗಳನ್ನು ತರುವಲ್ಲಿಐಕ್ಯಮತದಿಂದಒಟ್ಟಾಗಿಧನಿಗೂಡಿಸಲು ಸುಗ್ರಾಮಒಂದು ವೇದಿಕೆಯಾಗಿದೆ.

ಸುಗ್ರಾಮವು ಸದಸ್ಯತ್ವಆಧಾರಿತ ಸಂಘವಾಗಿದೆ. ಪ್ರಸಕ್ತವಾಗಿ17 ಜಿಲ್ಲೆಗಳ 51 ತಾಲ್ಲೂಕುಗಳಲ್ಲಿ ಸುಗ್ರಾಮದತಾಲ್ಲೂಕು ಸಂಘಗಳನ್ನು ರಚಿಸಲಾಗಿದ್ದು, 3000ಚುನಾಯಿತ ಮಹಿಳಾ ಸದಸ್ಯರ ಸದಸ್ಯತ್ವವನ್ನು ಹೊಂದಿದೆ.

ಉತ್ತಮ ಆಡಳಿತ ಮತ್ತು ಪ್ರಜಾಪ್ರಭುತ್ವವನ್ನು ಬಲಪಡಿಸುವಲ್ಲಿ ಪ್ರತಿನಿಧಿತ್ವವಷ್ಟೇಅಲ್ಲದೇ, ಸಕ್ರಿಯ ಮತ್ತು ಸಫಲ ನಾಯಕರಾಗಿ ಭಾಗವಹಿಸಲು ಸುಗ್ರಾಮದ ಸದಸ್ಯರುಇತರ ಸದಸ್ಯರಿಗೆ ಸಹಕಾರ ನೀಡುತ್ತಿದ್ದಾರೆ. ಸದಸ್ಯರ ಸುಸ್ಥಿರ ಪ್ರಯತ್ನಗಳಿಂದ ಸುಗ್ರಾಮವು ಇಂದು ರಾಜ್ಯ ಮಟ್ಟದ ಸಂಘವಾಗಿ ಹೊರಹೊಮ್ಮಿದೆ. ಇದರಿಂದ, ಗ್ರಾಮ ಪಂಚಾಯತಿಯಲ್ಲಿನಚುನಾಯಿತ ಮಹಿಳಾ ಸದಸ್ಯರ ಸಂಘಟಿತ ಶಕ್ತಿಯನ್ನುತೋರ್ಪಡಿಸುತ್ತದೆ.ಹಾಗೆಯೇ, ಚುನಾಯಿತ ಸದಸ್ಯರು ಸಮಾಜ ಪರಿವರ್ತಕರಾಗಿ ಮತ್ತು ಸ್ವಾವಲಂಬಿಗಳಾಗಿ, ಹಳ್ಳಿಯ/ಪಂಚಾಯತಿಯ ಸರ್ವಾಂಗೀಣಅಭಿವೃದ್ಧಿಗೆತಮ್ಮನ್ನುತಾವು ತೊಡಗಿಸಿಕೊಂಡಿದ್ದಾರೆ.

ಸುಗ್ರಾಮದ ಸದಸ್ಯರುಸ್ಥಳೀಯ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಯಶಸ್ವಿಯಾಗಿದ್ದು, ಸಮುದಾಯದಲ್ಲಿನಎಲ್ಲಾ ವರ್ಗದವರಿಗೂ ಸರ್ಕಾರದ ಯೋಜನೆಗಳು ದೊರಕುವಂತೆ ಮಾಡುತ್ತಿದ್ದಾರೆ. ಹಾಗೆಯೇ, ಸರ್ಕಾರದ ಯೋಜನೆಗಳು ಸರ್ಮಪಕವಾಗಿ ಕಾರ್ಯಗತವಾಗಿಸುವಂತಹ ನಿಟ್ಟಿನಲ್ಲಿ ತೊಡಗಿಸಿಕೊಂಡಿದ್ದಾರೆ.

ಇದಲ್ಲದೇ, ಸುಗ್ರಾಮದತಾಲ್ಲೂಕು ಸಭೆಗಳಲ್ಲಿ ತಮ್ಮ ಸವಾಲುಗಳನ್ನು ಮಂಡಿಸುತ್ತ, ಇತರಚುನಾಯಿತ ಮಹಿಳಾ ಸದಸ್ಯರ ಸಹಕಾರ ಹಾಗೂ ಬೆಂಬಲದೊಂದಿಗೆಐಕ್ಯಮತದಿಂದಧನಿಎತ್ತಿ ಸಮಸ್ಯೆಗಳನ್ನು ನಿವಾರಿಸುವಲ್ಲಿ ಯಶಸ್ವಿಯಾಗಿದ್ದಾರೆ.

### ಸುಗ್ರಾಮದ ಸಾಧನೆಗಳು :

ಸುಗ್ರಾಮದಯಶಸ್ಸು ವ್ಯಾಪಕವಾಗಿದೆ. ಸುಗ್ರಾಮದ ಸದಸ್ಯರುತಮ್ಮ



ಸಂಘದ ಸಭೆಗಳಲ್ಲಿ ಮತ್ತುತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಮಾಹಿತಿ ಸಂಗ್ರಹಿಸಿ, ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವರಲ್ಲದೇ, ಇತರೆ, ಚುನಾಯಿತ ಮಹಿಳಾ ಸದಸ್ಯರನ್ನುಉತ್ತೇಜಿಸುತ್ತಿದ್ದಾರೆ. ಸುಗ್ರಾಮದ ಪ್ರಮುಖ ಸಾಧನೆಗಳು ಈ ಕೆಳಕಂಡಂತಿವೆ:

### ಸರ್ಕಾರದ ನೀತಿಗಳ ಬಗ್ಗೆ ವಕಾಲತ್ತು

- ಗ್ರಾಮ ಪಂಚಾಯತಿಗಳಲ್ಲಿ ಸ್ಥಾಯಿ ಸಮಿತಿಗಳ ರಚನೆ, ಗೌರವಧನ ಮತ್ತು ಸಭಾಭತ್ಯೆಗಳು ಸಂದಾಯವಾಗದಿರುವಂತಹ ಸಮಸ್ಯೆಗಳನ್ನು ಪರಿಹರಿಸುವುದು
- ಪಂಚಾಯತಿಅಧ್ಯಕ್ಷರಅವಧಿಯನ್ನು ಬದಲಾವಣೆ ಮಾಡುವ ಕುರಿತು (ಕರ್ನಾಟಕ ಸರ್ಕಾರವುಅವಧಿಯನ್ನು ಹೆಚ್ಚಿಸುವ ಕುರಿತು ಪರಿಗಣಿಸುತ್ತಿದೆ)
- ಸ್ಥಳೀಯ ಸರ್ಕಾರಗಳಲ್ಲಿ ಮಹಿಳೆಯರಿಗೆ ಶೇಕಡಾ 50 ರಷ್ಟು ಮೀಸಲಾತಿ

### ಉತ್ತಮ ಆಡಳಿತಕ್ಕೆ ಉತ್ತೇಜನ ನೀಡುವುದು ಮತ್ತು ಹೊಣೆಗಾರಿಕೆ

- ಗ್ರಾಮ ಪಂಚಾಯತಿಗಳಲ್ಲಿ ಮತ್ತು ತಾಲ್ಲೂಕುಗಳಲ್ಲಿ ಭ್ರಷ್ಟಾಚಾರದ ವಿರುದ್ಧ ಹೋರಾಟ
- ವಸತಿ ಮತ್ತು ಪಿಂಚಣಿ ಯೋಜನೆಗಳಿಗೆ ಅರ್ಹತಾನುಸಾರವಾಗಿ ಫಲಾನುಭವಿಗಳನ್ನು ಗುರುತಿಸಿ, ಆಯ್ಕೆ ಮಾಡುವುದು
- ಸ್ಥಳೀಯ ಮಕ್ಕಳ ಶಿಶುವಿಹಾರಗಳು – ಅಂಗನವಾಡಿಗಳು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವುದನ್ನು ಖಾತ್ರಿಪಡಿಸುವುದು
- ಸಾರ್ವಜನಿಕ ವಿತರಣಾ ವ್ಯವಸ್ಥೆ ಮತ್ತು ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಪರಿವೀಕ್ಷಿಸುವುದು.

### ಪರಿವರ್ತಕರಾಗುವ ನಿಟ್ಟಿನಲ್ಲಿ ಸದಸ್ಯರಿಗೆ ಬೆಂಬಲ ನೀಡುವುದು

- ಆರೋಗ್ಯ, ಶಿಕ್ಷಣ, ನೀರು ಮತ್ತು ನೈರ್ಮಲ್ಯ ಮತ್ತು ಬಡತನ ನಿವಾರಣೆಯಂತಹ ಸಾಮಾಜಿಕ ಭದ್ರತೆ ನೀಡುವ ಸರ್ಕಾರಿ ಯೋಜನೆಗಳು ಮತ್ತುಇತರೆ ಯೋಜನೆಗಳು ಪರಿಣಾಮಕಾರಿಯಾಗಿ ಅನುಷ್ಠಾನವಾಗುವಂತೆ ಖಾತ್ರಿ ಪಡಿಸುವುದು
- ಸಮುದಾಯದಲ್ಲಿರುವ ವೃದ್ಧರು ಮತ್ತು ಹೆಣ್ಣುಮಕ್ಕಳಿಗೆ ಶೌಚಾಲಯಗಳನ್ನು ನಿರ್ಮಾಣ ಮಾಡುವುದು
- ಗ್ರಾಮ ಪಂಚಾಯತಿಯಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯವನ್ನು ಕಾಯ್ದುಕೊಳ್ಳುವುದು

### ಲಿಂಗತ್ವ ಹಾಗೂ ಸಾಮಾಜಿಕ ನ್ಯಾಯ

- ಮನೆ ಮತ್ತು ಕಾರ್ಯಸ್ಥಳಗಳಲ್ಲಿ ಮಹಿಳೆಯರ ಮೇಲಿನ ಹಿಂಸೆಗಳನ್ನು ತಡೆಯುವುದು ಮತ್ತುಅರಿವು ಮೂಡಿಸುವುದು
- ಲಿಂಗಾಧಾರಿತ ಭ್ರೂಣ ಹತ್ಯೆತಡೆಅಭಿಯಾನ ಮತ್ತು ಬಾಲ್ಯ ವಿವಾಹವನ್ನುತಡೆಗಟ್ಟುವುದು
- ರಾಜ್ಯ ಮಹಿಳಾ ಆಯೋಗ/ಸಹಾಯವಾಣಿಗಳೊಂದಿಗೆ

ನಿಯಮಿತವಾಗಿ ಸಂವಾದ ಮತ್ತು ಸಂಯೋಜನೆ ನಡೆಸುವುದು.

ಸುಗ್ರಾಮವು ಕಾರ್ಯನಿರ್ವಹಿಸುತ್ತಿರುವ ಜಿಲ್ಲೆ/ತಾಲ್ಲೂಕಿನಲ್ಲಿ ಗುರುತಿಸಲಾಗುತ್ತಿದ್ದು, ಸುಗ್ರಾಮದ ಸದಸ್ಯರಾಗಿಚುನಾಯಿತ ಮಹಿಳೆಯರು ತಮ್ಮ ನಾಯಕತ್ವವನ್ನು ಬಲಪಡಿಸಿಕೊಂಡಿರುವರಲ್ಲದೇ, ಮಾದರಿಗ್ರಾಮ ಪಂಚಾಯತಿಯನ್ನಾಗಿತಮ್ಮ ಪಂಚಾಯತಿಯನ್ನು ಮಾಡಬೇಕೆನ್ನುವಕನಸನ್ನು ನನಸಾಗಿಸುವತ್ತಕಾರ್ಯನಿರತರಾಗಿದ್ದಾರೆ.

ಚುನಾಯಿತ ಮಹಿಳಾ ಸದಸ್ಯರನ್ನೊಳಗೊಂಡ ಸುಗ್ರಾಮವನ್ನು ರಚಿಸುವಲ್ಲಿ ದಿ ಹಂಗರ್ ಪ್ರಾಜೆಕ್ಟ್ ಸಂಸ್ಥೆಯು ಪ್ರಮುಖವಾದ ಪಾತ್ರವನ್ನು ವಹಿಸಿದೆ.

**ಸುಗ್ರಾಮದ ಬಗ್ಗೆ ಹೆಚ್ಚಿನ ಮಾಹಿತಿಗೆ ಮತ್ತು ಸುಗ್ರಾಮದ ಸದಸ್ಯತ್ವವನ್ನು ಪಡೆಯಲು, ಸಂಪರ್ಕಿಸಿ:**

**ಸುಗ್ರಾಮ–ಗ್ರಾಮ ಪಂಚಾಯತ್‌ಚುನಾಯಿತ ಮಹಿಳಾ ಪ್ರತಿನಿಧಿಗಳ ಸಂಘ –ಕರ್ನಾಟಕ**

ವಿಳಾಸ : c/o ದಿ ಹಂಗರ್ ಪ್ರಾಜೆಕ್ಟ್, ನಂ. 4, 2ನೇ ಮಹಡಿ, ಬರ್ಲಿ ಅಡ್ಡರಸ್ತೆ, ಲಾಂಗ್ ಫರ್ಡ್‌ಟೌನ್, ಶಾಂತಿನಗರ, ಬೆಂಗಳೂರು – 560 025. ಶ್ರೀಮತಿ. ಎಂ. ರೇಣುಕ, ಅಧ್ಯಕ್ಷರು–9972261319, ಶ್ರೀಮತಿ. ಸುನೀತಜಗದೀಶ್, ಕಾರ್ಯದರ್ಶಿ–9611063639 ಅಥವಾ ಶ್ರೀಮತಿ. ಪದ್ಮಿನಿ ಅನಂತ್, ನಿರ್ದೇಶಕರು–9845317795/7847815159, ಅಂತರ್ಜಾಲ: www.sugrama.org

# ಪಂಚಾಯತ್ ರಾಜ್ ಸಬಲೀಕರಣದಲ್ಲಿ ಸಮುದಾಯ ಸಂಘಟನೆಗಳ ಪಾತ್ರ

ಒಟ್ಟಾಗಿ ಬರುವುದು ಪ್ರಾರಂಭ ಒಟ್ಟಾಗಿ ಕಲಿಯುವುದು ಒಂದು ಪ್ರತಿಕ್ರಿಯೆ ಒಟ್ಟಾಗಿ ಒಗಟ್ಟಾಗಿ ಕೆಲಸ ಮಾಡುವುದು ಪರಿವರ್ತನೆ ಮತ್ತು ಯಶಸ್ಸು ಗ್ರಾಮೀಣ ಸಮುದಾ0ುದ ಬದುಕು ಮತ್ತು ಆಡಳಿತವನ್ನು ಸುಗುಮವಾಗಿ ನಿರ್ವಹಿಸಿಕೊಂಡು ಹೋಗುವ ವ್ಯವಸ್ಥೆ0ುೕ ಪಂಚಾ0ುತ್ ರಾಜ್ ವ್ಯವಸ್ಥೆ. ಹಳ್ಳಿಗಳ ಸರ್ವಾಂಗೀಣ ಪ್ರಗತಿ0ುಾಗಬೇಕಾದರೆ ಅಧಿಕಾರದ ವಿಕೇಂದ್ರಿಕರಣವಾಗಬೇಕು. ಗ್ರಾಮೀಣ ಸಮುದಾ0ು ತನ್ನದೇ ಆದ ಸಾರ್ವಭೌಮತ್ವವನ್ನು ಹೊಂದಿದ ಸ್ವ0ುಂ ಸರ್ಕಾರವನ್ನು ಹೊಂದಿರಬೇಕು. ಅದು ಪ್ರಜಾಪ್ರಭುತ್ವ ತಳಹದಿ0ು ಮೇಲೆ ರಚಿಸಲ್ಪಟ್ಟ ಸಂಸ್ಥೆ0ುಾಗಿರಬೇಕು ಎಂಬ ಪರಿಕಲ್ಪನೆಗಳು ಮೂಡಿಬಂದವು. ಸ್ವಾತಂತ್ರ ಹೋರಾಟ ಸಮ0ುದಲ್ಲಿ ಮಹಾತ್ಮ ಗಾಂಧೀಜಿ ಗ್ರಾಮ ಸ್ವರಾಜ್ಯ ಪರಿಕಲ್ಪನೆಗೆ ಒತ್ತು ನೀಡಿದರು. ಸಮಾಜದಲ್ಲಿ ಶೋಷಿತರು, ದುರ್ಬಲರು ಶಕ್ತರಾಗಬೇಕು. ಆಡಳಿತದಲ್ಲಿ ಜನರು ಸಹಭಾಗಿಗಳಾಗಬೇಕು. ಅಧಿಕಾರ ಜನಸಾಮಾನ್ಯರ ವಶಕ್ಕೆ ಬಂದಾಗ ಮಾತ್ರ ಭಾರತದ ಸ್ವಾತಂತ್ರ ಅರ್ಥಪೂರ್ಣವೆಂದು ಗಾಂಧೀಜಿ ನಂಬಿದ್ದರು. ಅವರ ಪರಿಕಲ್ಪನೆ0ುಲ್ಲಿ ಆಡಳಿತ ಸಂಪೂರ್ಣವಾಗಿ ವಿಕೇಂದ್ರಿಕರಣವಾಗಬೇಕು. ಹಾಗೆ0ುೕ ಗ್ರಾಮಗಳು ತಮ್ಮನ್ನು ತಾವೇ ಆಳುವ ಹಕ್ಕು ಹೊಂದಿರಬೇಕು ಎಂದಾಗಿತ್ತು. ಅವರು ಗ್ರಾಮ ಸ್ವರಾಜ್ಯದ ಕನಸು ಕಂಡಿದ್ದರು.

ಭಾರತೀ0ು ಸಂವಿಧಾನದ ನಿರ್ದೇಶಕ ತತ್ವಗಳ 40 ನೇ ಕಲಂನಲ್ಲಿ ರಾಜ್ಯವು ಗ್ರಾಮಗಳಲ್ಲಿ ಪಂಚಾ0ುತ್ ವ್ಯವಸ್ಥೆ0ುನ್ನು ನಿರ್ಮಾಣ ಮಾಡಿ ಅವುಗಳಿಗೆ ಅಧಿಕಾರ ಮತ್ತು ಸ್ವ0ುಂ ಆಡಳಿತವನ್ನು ನಿರ್ವಹಿಸುವ ಶಕ್ತಿ0ುನ್ನು ನೀಡುವಂತೆ ಕ್ರಮ ತೆಗೆದುಕೊಳ್ಳತಕ್ಕದ್ದು. ಭಾರತೀಯ ಪ್ರಜಾಪ್ರಭುತ್ವ ಗಣರಾಜ್ಯದಲ್ಲಿ ಸಂವಿಧಾನದ 73ನೆಯ ಮತ್ತು 74ನೆಯ ತಿದ್ದುಪಡಿಗಳು ದೇಶದಾದ್ಯಂತ ಬಲಶಾಲಿ ಸ್ಥಳೀಯ ಸರ್ಕಾರಗಳ ಉದಯವನ್ನು ವೀಕ್ಷಿಸಿದೆ. ಸಂವಿಧಾನದ 73ನೆಯ ತಿದ್ದುಪಡಿಯು ಜಾರಿಗೆ ಬರುವುದರ ಜೊತೆಗೆ, ಕರ್ನಾಟಕವು 1993 ರಲ್ಲಿ ಒಂದು ಹೊಸ ಕಾಯಿದೆಯನ್ನು ರಚಿಸುವುದರ ಮೂಲಕ ರಾಷ್ಟ್ರದಲ್ಲಿಯೇ ಪ್ರಥಮ ರಾಜ್ಯದ ಹೆಗ್ಗಳಿಕೆಗೆ ಪಾತ್ರವಾಯಿತು. ಈ ಹೊಸ ಅಧಿನಿಯಮದನ್ವಯ ಜಿಲ್ಲಾ ಪಂಚಾಯತಿ (ಜಿಲ್ಲಾ ಮಟ್ಟದಲ್ಲಿ), ತಾಲ್ಲೂಕು ಪಂಚಾಯತಿ (ತಾಲ್ಲೂಕ ಮಟ್ಟದಲ್ಲಿ) ಮತ್ತು ಗ್ರಾಮ ಪಂಚಾಯತಿಗಳ (ಗ್ರಾಮೀಣ ಮಟ್ಟದಲ್ಲಿ) ಜೊತೆಗೆ ಪಂಚಾಯತಿ ರಾಜ್‌ಗೆ ಒಂದು ಮೂರು–ಹಂತದ ಸ್ವರೂಪವನ್ನು ಒದಗಿಸಿತು. ಇದಲ್ಲದೇ, ಈ ತಿದ್ದುಪಡಿಯನ್ವಯ ಮಹಿಳೆಯರಿಗೆ ಶೇಕಡ 33 ಪ್ರತಿಷತ ಮೀಸಲಾತಿಯನ್ನು ನೀಡಲಾಯಿತು. ಅದರಂತೆ, ಮಹಿಳೆಯರೂ ಕೂಡ ಸ್ಥಳೀಯ ಸರ್ಕಾರಗಳಲ್ಲಿ ಭಾಗವಹಿಸಲು ಅನುವು ಮಾಡಿತು. ಮಹಿಳೆ0ುರು ಅಭಿವೃದ್ಧಿ ಚಟುವಟಿಕೆಗಳಲ್ಲಿ ಮುಂದಾಳತ್ವ ವಹಿಸಿ, ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಗಳನ್ನು ತರುವಲ್ಲಿ ಬಹು ಮುಖ್ಯಪಾತ್ರವನ್ನು ವಹಿಸಲು ಸರ್ಕಾರವು ಹಲವಾರು ಕಾ0ುರ್ಕ್ರಮಗಳನ್ನು ಹಮ್ಮಿಕೊಂಡಿದೆ. ಹಾಗೆಯೇ, ಚುನಾಯಿತ ಮಹಿಳಾ ಸದಸ್ಯರಿಗೆ ತರಬೇತಿ ಕಾರ್ಯಕ್ರಮಗಳನ್ನು ಅಬ್ದುಲ್ ನಸೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಮೂಲಕ ಹಮ್ಮಿಕೊಳ್ಳಲಾಗುತ್ತಿದೆ. ಈ ತರಬೇತಿ ಸಂಸ್ಥೆಯ ಮುಖ್ಯ ಉದ್ದೇಶ ಚುನಾಯಿತ ಮಹಿಳಾ ಸದಸ್ಯರ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತ, ಚುನಾಯಿತ ಮಹಿಳೆಯರ ಸಬಲೀಕರಣದಲ್ಲಿ ತೊಡಗಿಸಿಕೊಂಡಿತು.

ಈ ಸಂದರ್ಭದಲ್ಲಿ ಸ್ಥಳೀಯ ಸರ್ಕಾರಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಸರ್ಕಾರವು ಪ್ರಮುಖ ಪಾತ್ರ ನಿರ್ವಹಿಸುವುದರೊಂದಿಗೆ, ಸರ್ಕಾರೇತರ ಸಂಸ್ಥೆಗಳು ಕೂಡ ಪ್ರಮುಖ ಪಾತ್ರ ನಿರ್ವಹಿಸುತ್ತದೆ. ಇವುಗಳಲ್ಲಿ ಪ್ರಮುಖವಾಗಿ ನಾಗರಿಕ ಸಮಾಜದ ಸಂಘಟನೆಗಳು, ಸರ್ಕಾರೇತರ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು, ಮಾಧ್ಯಮ ಸಂಸ್ಥೆಗಳು ಹಾಗೂ ರಾಜಕೀಯ ಪಕ್ಷಗಳು ಹೆಚ್ಚು ಕಾರ್ಯೋನ್ಮುಖವಾಗಿದ್ದು, ಸಮುದಾಯದ ಏಳಿಗೆಗಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿವೆ.

ಆಧುನಿಕ ಸಮಾಜದ ಮುಖ್ಯ ಭಾಗವಾಗಿರುವ ಸರ್ಕಾರೇತರ ಸಂಸ್ಥೆಗಳನ್ನು ಗ್ರಾಮೀಣ ಸರ್ಕಾರಕ್ಕೆ ಮೂಲ ಸೌಲಭ್ಯವನ್ನು ಒದಗಿಸುವ ಹಾಗೂ ಗ್ರಾಮೀಣ ಸಮಾಜದಲ್ಲಿ ಬದಲಾವಣೆಯನ್ನು ಹುಟ್ಟು ಹಾಕುವಂತಹ/ತರುವಂತಹ ಸಂಸ್ಥೆಗಳನ್ನಾಗಿ ಪರಿಗಣಿಸಲಾಗಿದೆ. ಈ ಸಂಸ್ಥೆಗಳ ಬೇರಿನ ಹಂತದಲ್ಲಿನ ಕೆಲಸದ ಅನುಭವಗಳಿಂದ ಹಾಗೂ ಕೆಲಸಗಳಿಗೆ ಬದ್ಧವಾಗಿರುವಂತಹ ಹಾಗೂ ತರಬೇತಿ ಹೊಂದಿರುವ ಸದಸ್ಯರನ್ನೊಳ ಗೊಂಡಿರುವುದರಿಂದ, ಗ್ರಾಮೀಣ ಸರ್ಕಾರಗಳ ದಕ್ಷತೆಯನ್ನು ವೃದ್ಧಿಸುವಲ್ಲಿನ ಅವರ ಸಾಮರ್ಥ್ಯದ ಮೇಲೆ ರಾಷ್ಟ್ರ ತುಂಬಾ ವಿಶ್ವಾಸವನ್ನು ಹೊಂದಿದೆ.

ಗ್ರಾಮೀಣ, ಹಿಂದುಳಿದ ಹಾಗೂ ನಗರದ ಕೊಳೆಗೇರಿ ಪ್ರದೇಶಗಳ ಜನರಲ್ಲಿ ಸರ್ಕಾರದ ಕಾರ್ಯಕ್ರಮಗಳ ಕುರಿತು ಜಾಗೃತಿ ಮೂಡಿಸುವಲ್ಲಿ ಈ ಸಂಘಟನೆಗಳ ಮೂಲಕ ನಿರಂತರವಾಗಿ ಶ್ರಮ ವಹಿಸಲಾಗುತ್ತಿದೆ. ಇದರೊಂದಿಗೆ, ಚುನಾಯಿತ ಸದಸ್ಯರಿಗೆ ತರಬೇತಿ ನೀಡುವಲ್ಲಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಸಾಮಾಜಿಕ ಕಲ್ಯಾಣ, ಆರೋಗ್ಯ, ಶಿಕ್ಷಣ, ನೀರು ಸಂಗ್ರಹಣಾ ಅಭಿವೃದ್ಧಿ ಕಾರ್ಯಕ್ರಮಗಳು, ಇತ್ಯಾದಿ ಚಟುವಟಿಕೆಗಳಲ್ಲಿ ಸಹಭಾಗಿಯಾಗಿವೆ.

ಸಮುದಾಯ ಸಂಘಟನೆಗಳು ಜನರ ಆಶೋತ್ತರಗಳನ್ನು ಅದರಲ್ಲೂ ಮುಖ್ಯವಾಗಿ ಪ್ರಜಾಪ್ರಭುತ್ವ ಕನಸನ್ನು ಪೂರೈಸುವ ನಿಟ್ಟಿನಲ್ಲಿ ಸಕ್ರಿಯವಾದ ಪಾತ್ರವನ್ನು ನಿರ್ವಹಿಸುತ್ತಿದೆ. ಈ ಸಂಘಟನೆಗಳು ಪರಿಕಲ್ಪನೆಯು ಸಂಘಟಿತಾತ್ಮಕ ಜೀವನ ಮೌಲ್ಯಗಳನ್ನು ಪರಿಗಣಿಸುತ್ತದೆ – ಹಿತಾಸಕ್ತಿ ಗುಂಪುಗಳು, ವೃತ್ತಿಪರ ಮತ್ತು ಇತರ ಸಂಘಗಳು, ಸ್ವಯಂಸೇವಾ ಸಂಸ್ಥೆಗಳು, ಜನಸಾಮಾನ್ಯ ಸಂಘಟನೆಗಳು ಮತ್ತು ಇತರ ಸಾಮಾಜಿಕ ಆದೇಶಗಳನ್ನು ಜಾಲಬಂಧದ ಮೂಲಕ ಸಮಾನ ಮನಸ್ಕ ಸಮುದಾಯದವರನ್ನು ಮತ್ತು ಸಮಾನ ಕಾಳಜಿ ಇರುವಂತಹ ಸಂಸ್ಥೆಗಳನ್ನು ಒಗ್ಗೂಡಿಸುವ ಪ್ರಯತ್ನವಾಗಿದೆ.

ಈ ನಿಟ್ಟಿನಲ್ಲಿ ಸಮುದಾಯ ಸಂಘಟನೆಗಳು ಚುನಾಯಿತ ಸದಸ್ಯರ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಗಳಲ್ಲದೆ, ಪ್ರಚಲಿತವಿರುವ ಸಾಮಾಜಿಕ–ಆರ್ಥಿಕ ಪರಿಸ್ಥಿತಿಯ ಕುರಿತು ಸ್ವ ವಿಶ್ಲೇಷಣೆ ಮಾಡುವ ಆಧಾರದ ಮೇಲೆ ತಾಂತ್ರಿಕ ಸಹಾಯ ಒದಗಿಸುವುದು ಹಾಗೂ ಅಲ್ಪಸಂಖ್ಯಾತ ಮತ್ತು ಹಿಂದುಳಿದ ಭಾಗಗಳ ಒಳಿತಿಗಾಗಿ ಯೋಜನಾ ಪ್ರಕ್ರಿಯೆಯಲ್ಲಿ ಜನರ ಸಹಭಾಗಿತ್ವವನ್ನು ಉತ್ತೇಜಿಸುತ್ತದೆ. ಆಧುನಿಕ ಸಮಾಜದ ಮುಖ್ಯ ಭಾಗವಾಗಿರುವ ಸರ್ಕಾರೇತರ ಸಂಸ್ಥೆಗಳನ್ನು ಗ್ರಾಮೀಣ ಸರ್ಕಾರಕ್ಕೆ ಮೂಲ ಸೌಲಭ್ಯವನ್ನು ಒದಗಿಸುವ ಹಾಗೂ ಗ್ರಾಮೀಣ ಸಮಾಜದಲ್ಲಿ ಬದಲಾವಣೆಯನ್ನು ಹುಟ್ಟು ಹಾಕುವಂತಹ/ತರುವಂತಹ ಸಂಸ್ಥೆಗಳಾಗಿ ಪರಿಗಣಿಸಲಾಗಿದೆ.

**ಸರ್ಕಾರದ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವಲ್ಲಿ ಸಮುದಾಯ ಸಂಘಟನೆಗಳ ಪಾತ್ರ**

**ಗ್ರಾಮೀಣಾಭಿವೃದ್ಧಿ /ಪಂಚಾಯತ್ ರಾಜ್ :** ಯೋಜನೆಯ ಕಾರ್ಯಾಚರಣೆಯಲ್ಲಿ ಸಹಭಾಗಿತ್ವದ ಪಾಲುದಾರಿಕೆ. ಗ್ರಾಮ ಪಂಚಾಯತಿ ಹಾಗೂ ಗ್ರಾಮೀಣ ಹಂತದ ಗುಂಪುಗಳಿಗೆ ಸಾಮರ್ಥ್ಯವನ್ನು ಮೂಡಿಸುವ ಕಾರ್ಯಕ್ರಮ, ಮಾಹಿತಿ, ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳನ್ನು ವೃದ್ಧಿಸುವುದು/ಬೆಂಬಲಿಸುವುದು. ಯೋಜನೆಗಳ ಅನುಷ್ಠಾನವನ್ನು ಪರಿಣಾಮಕಾರಿಯಾಗುವಂತೆ ಮಾಡುವುದು, ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ಹೆಚ್ಚಿಸುವುದು, ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಅರಿವು ಮೂಡಿಸುವುದು ಮತ್ತು ಜಾಬ್ ಕಾರ್ಡ್, ಉದ್ಯೋಗ ದೊರಕಿಸಿಕೊಡುವಲ್ಲಿ ಪಾತ್ರ, ಗ್ರಾಮ ಪಂಚಾಯತಿಯ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭ್ರಷ್ಟಾಚಾರ ತಡೆಯುವ ನಿಟ್ಟಿನಲ್ಲಿ ಪಾತ್ರ, ಸ್ಥಾಯಿ ಸಮಿತಿಗಳ ಕಾರ್ಯರಚನೆ, ಚಟುವಟಿಕೆಗಳು, ಸಕಾಲ, ಮಾಹಿತಿ ಹಕ್ಕು ಕಾಯಿದೆಗಳ ಸಮರ್ಪಕ ಬಳಕೆ/ಅರಿವು.



**ಹಿಂದುಳಿದ ವರ್ಗಗಳ ಕಲ್ಯಾಣ :** ಅರ್ಹ ಫಲಾನುಭವಿ ಗಳಿಗೆ ಗ್ರಾಮೀಣ ವಸತಿ, ಹಿಂದುಳಿದ ವರ್ಗದವರ ಕಲ್ಯಾಣ, ಅಲ್ಪ ಸಂಖ್ಯಾತರ ಕಲ್ಯಾಣ ಕಾರ್ಮಿಕ, ಉದ್ಯೋಗ ಮತ್ತು ತರಬೇತಿ, ಗ್ರಾಮೀಣ ನೀರು ಸರಬರಾಜು, ಅಂಗವಿಕಲರ ಮತ್ತು ಹಿರಿಯ ನಾಗರೀಕರ ಕಲ್ಯಾಣ ಕಾರ್ಯಕ್ರಮಗಳನ್ನು ಒದಗಿಸುವ ನಿಟ್ಟಿನಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದೆ. ಮತ್ತು ನೀರು ನೈರ್ಮಲ್ಯ, ಬಡತನ ನಿವಾರಣೆಯಂತಹ ಸಾಮಾಜಿಕ ಭದ್ರತೆ ನೀಡುವ ಸರ್ಕಾರಿ ಯೋಜನೆಗಳು ಮತ್ತು ಇತರೆ ಯೋಜನೆಗಳು ಪರಿಣಾಮಕಾರಿಯಾಗಿ ಅನುಷ್ಠಾನವಾಗುವಂತೆ ಸಮುದಾಯ ಸಂಘಟನೆಗಳು ಖಾತ್ರಿ ಪಡಿಸುತ್ತಿವೆ.

**ಮಹಿಳಾ ಮತ್ತು ಮಕ್ಕಳ ಕಲ್ಯಾಣ :** ಮಹಿಳೆಯರು ಮತ್ತು ಹೆಣ್ಣುಮಕ್ಕಳ ಮೇಲೆ ಆಗುತ್ತಿರುವಂತಹ ದೌರ್ಜನ್ಯಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸಮುದಾಯ ಸಂಘಟನೆಗಳು ಕಾರ್ಯ ಪ್ರವೃತ್ತರಾಗಿದ್ದು, ಅರಿವು ಮೂಡಿಸು ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ, ಬಾಲ್ಯ ವಿವಾಹ ತಡೆ, ಬಾಲ ಕಾರ್ಮಿಕತನ ನಿರ್ಮೂಲನೆ, ಭ್ರೂಣಹತ್ಯೆ, ಮಕ್ಕಳ ಸಾಗಾಣಿಕೆ, ವಿಚಾರಗಳ ಬಗ್ಗೆ ಅರಿವು ಮೂಡಿಸುವುದು.

**ಶಿಕ್ಷಣ :** ಮಧ್ಯಾಹ್ನದ ಬಿಸಿಊಟ ವ್ಯವಸ್ಥೆಯನ್ನು ಕಾರ್ಯಗತಗೊಳಿಸುವಲ್ಲಿ ಸಹಭಾಗಿತ್ವ, ಶಾಲೆ ಬಿಟ್ಟ ಮಕ್ಕಳನ್ನು ಶಾಲೆಗೆ ಸೇರಿಸುವಂತೆ, ಕುಟುಂಬಕ್ಕೆ ಪ್ರೇರಣೆ ನೀಡುವುದು; ಅಂಗನವಾಡಿಯಲ್ಲಿ ಮಕ್ಕಳ ಪಾಲನೆ/ಪೋಷಣೆ, ಅಪೌಷ್ಟಿಕತೆಯ ನಿವಾರಣೆ, ಶಿಕ್ಷಣ ಹಕ್ಕು ಕಾಯಿದೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವುದು;

**ಆರೋಗ್ಯ ಹಾಗೂ ಕುಟುಂಬ ಕಲ್ಯಾಣ :** ಸಾಮಾಜಿಕ ಆರೋಗ್ಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸ್ಥಳೀಯ ಆರೋಗ್ಯ ಕೇಂದ್ರ/ಘಟಕಗಳು ಉತ್ತಮ ಸೇವೆ ನೀಡುವಂತೆ ವಕಾಲತ್ತು ಮಾಡುವುದು, 24/7 ಸೇವೆ, ಮತ್ತು ಗ್ರಾಮೀಣ ಆರೋಗ್ಯ ಹಾಗೂ ನೈರ್ಮಲ್ಯ ವ್ಯವಸ್ಥೆಯ ಸದಸ್ಯರ ಸಾಮರ್ಥ್ಯ ವೃದ್ಧಿಸುವುದು.

**ಮೂಲ ಭೂತ ಸೌಕರ್ಯಗಳು :** ನೀರು, ನೈರ್ಮಲ್ಯ, ವಸತಿ, ರಸ್ತೆ, ಚರಂಡಿ, ಶೌಚಾಲಯ, ಸಾರಿಗೆ, ವಿದ್ಯುತ್, ಇತರೆ ಎಲ್ಲಾ ಮೂಲಭೂತ ಸೌಲಭ್ಯಗಳು, ಕೃಷಿ, ವ್ಯವಸಾಯ ಉತ್ಪನ್ನ ಹಾಗೂ ಇತರೆ ಸೌಲಭ್ಯ ಸಮುದಾಯದ ಜನರಿಗೆ ಸಿಗುವಂತೆ ಮಾಡುವಲ್ಲಿ ನಿರತರಾಗಿದ್ದಾರೆ.

**ಚುನಾಯಿತ ಮಹಿಳಾ ಸದಸ್ಯರ ಸಬಲೀಕರಣ ಮತ್ತು ಸಮುದಾಯ ಸಂಘಟನೆಗಳ ಪಾತ್ರ:** ಮಹಿಳಾ ಮೀಸಲಾತಿಯಿಂದಾಗಿ, ತೆರೆಯ ಮರೆಯಲ್ಲಿರುವ ಬಹು ದಿನಗಳಿಂದ ಶೋಷಣೆಗೆ ಒಳಗಾದ ಮಹಿಳೆಯರು ಬೆಳಕಿಗೆ ಬಂದರು. ಜನಸಂಖ್ಯೆಯ ಸುಮಾರು ಅರ್ಧದಷ್ಟಿರುವ ಸ್ತ್ರೀಯರಿಗೆ ಹೊಸ ಭರವಸೆಯ ಮಾರ್ಗ ತೆರೆಯಲ್ಪಟ್ಟಿತು. ರಾಜಕೀಯ ಎಂದರೇನು? 'ರಾಗಿ ಬೀಸುವುದು ತಪ್ಪೀತೇ' ಎಂಬ ಮಾತು ಮೌಲ್ಯಕಳೆದುಕೊಂಡಿತು. ಇಂದು ಕೆಲವರು ಆಯ್ಕೆಯಾಗಿ ಅಧಿಕಾರ ನಡೆಸುತ್ತಿದ್ದಾರೆ. ನಾಳೆ ನಮ್ಮ ಸರದಿಯೂ ಬಂದೀತು. ನಾವೂ ಖುರ್ಚಿ ಏರಿ ಅಧಿಕಾರ ನಡೆಸೇವು ಎಂಬ ಆಸೆ ಮಹಿಳೆಯರಲ್ಲಿ ಕುಡಿಯೊಡೆದಿದೆ. ಶತ ಶತಮಾನಗಳಿಂದಾದ ಅನ್ಯಾಯ ಅಧಿಕಾರವಂಚನೆಗೊಳಗಾದ ಮಹಿಳೆ ಈಗ ನಿಟ್ಟುಸಿರು ಬಿಟ್ಟು ನಿರಾಳವಾಗಿದ್ದಾಳೆ.

ಭಾರತೀಯ ಸಂವಿಧಾನದ 73 ಮತ್ತು 74ನೇ ತಿದ್ದುಪಡಿಯ ಮೂಲಕ ಮಹಿಳೆಯರಿಗೆ 33.3ರಷ್ಟು ಮೀಸಲಾತಿಯನ್ನು ನೀಡಿರುವುದರ ಪರಿಣಾಮದಿಂದಾಗಿ ಸುಮಾರು ಹತ್ತು ಲಕ್ಷಕಿಂತಲೂ ಹೆಚ್ಚು ಮಹಿಳೆಯರು ಅಧಿಕಾರವನ್ನು ಪಡೆದಿರುತ್ತಾರೆ. ರಾಜಕೀಯದಲ್ಲಿ ಭಾಗವಹಿಸುವಿಕೆ ಇರುವುದರಿಂದ, ಅವರ ತಾಂತ್ರಿಕ ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸುವ ಅವಶ್ಯಕತೆ ಇದೆ ಎಂಬುದನ್ನು ಮನಗಂಡ ಸರ್ಕಾರ ಹಾಗೂ ಹಲವಾರು ಸರ್ಕಾರೇತರ ಸಂಘ ಸಂಸ್ಥೆಗಳು ಚುನಾಯಿತ ಮಹಿಳಾ ಪ್ರತಿನಿಧಿಗಳ ವ್ಯಕ್ತಿತ್ವ ವಿಕಸನ ಹಾಗೂ ರಾಜಕೀಯ ಪರಿಕಲ್ಪನೆಯ ವಿಷಯವಾಗಿ ತಿಳುವಳಿಕೆಯನ್ನು ನೀಡುತ್ತಿದ್ದಾರೆ. ಸ್ಥಳೀಯ ಮಟ್ಟದಲ್ಲಿ – ಗ್ರಾಮ ಪಂಚಾಯತಿ ಮಟ್ಟದಲ್ಲಿ ಸಂಘಟಿತಾತ್ಮಕ ನಿಲುವುಗಳಿಂದ ಸಾರ್ವಜನಿಕ ಸೇವೆಗಳ ಗುಣಮಟ್ಟದಲ್ಲಿ ಸುಧಾರಣೆಯನ್ನು ತರಲು ಸಾಧ್ಯವಾಗುವುದು. ಇದರಿಂದ ಸ್ಥಳೀಯ ಮಟ್ಟದಲ್ಲಿ ಪಾರದರ್ಶಕತೆ, ಉತ್ತರದಾಯಿತ್ವವನ್ನು ಬಲಪಡಿಸುವ ನಿಟ್ಟಿನಲ್ಲಿ ಸಮುದಾಯ ಸಂಘಟನೆಗಳು ಕಾರ್ಯನಿರತರಾಗಿದ್ದಾರೆ. ಗ್ರಾಮ ಪಂಚಾಯತ್ ಮಟ್ಟದಲ್ಲಿ ದಿ ಹಂಗರ್ ಪ್ರಾಜೆಕ್ಟ್ ಮತ್ತು ಇದರ ಸಹಭಾಗಿ ಸಂಸ್ಥೆಗಳು, ಮಹಿಳಾ ಸಾಮಖ್ಯ, ಇಂಡಿಯನ್ ಸೋಷಿಯಲ್ ಇನ್ಸಿಟಿಟ್ಯೂಟ್, ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ ಇವೇ ಮೊದಲಾದ ಸಂಸ್ಥೆಗಳು ಗ್ರಾಮ ಪಂಚಾಯತಿಯಲ್ಲಿ ಚುನಾಯಿತ ಮಹಿಳಾ ಸದಸ್ಯರ ಸಾಮರ್ಥ್ಯ ಅಭಿವೃದ್ಧಿ ಮಾಡುವ ನಿಟ್ಟಿನಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಸಿವಿಕ್, ಬೆಂಗಳೂರು ಸಂಸ್ಥೆಯು ಗ್ರಾಮ ಪಂಚಾಯತಿ ಮಟ್ಟದಲ್ಲಿ ವಿದ್ಯುತ್ ಸಂಬಂಧಿತವಾಗಿ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳುತ್ತ ಸುಗ್ರಾಮದೊಂದಿಗೆ ವಕಾಲತ್ತು ಮಾಡುವ ನಿಟ್ಟಿನಲ್ಲಿ ಸಕ್ರಿಯವಾಗಿದೆ. ಇದಲ್ಲದೇ, ಚುನಾವಣೆ ಸಂಬಂಧಿತವಾಗಿ ನಮ್ಮ ಮತ ಮಾರಾಟಕ್ಕಿಲ್ಲ ಎಂಬ ಆಂದೋಲನದ ಮೂಲಕ ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ, ಸುಗ್ರಾಮ, ದಿ ಹಂಗರ್ ಪ್ರಾಜೆಕ್ಟ್, ಹಾಗೂ ಇತರೆ ಸಂಸ್ಥೆಗಳು ಕಾರ್ಯನಿರತರಾಗಿದ್ದು, ಪಕ್ಷಗಳ ಚುನಾವಣಾ ಪ್ರಣಾಳಿಕೆಯಲ್ಲಿ ತಮ್ಮ ಬೇಡಿಕೆಗಳನ್ನು ಸಲ್ಲಿಸುತ್ತಿರುವರು.

**ಚುನಾಯಿತ ಮಹಿಳೆಯರು ಮತ್ತು ಸಂಘಟನೆಗಳು:**

ಚುನಾಯಿತ ಮಹಿಳಾ ಸದಸ್ಯರು ರಾಜಕೀಯ ಪರಿಕಲ್ಪನೆಯ ತಿಳುವಳಿಕೆಯ ನಂತರವೂ ಕೂಡ ಅವರಲ್ಲಿ ಒಮ್ಮತವಿಲ್ಲದಿದ್ದರಿಂದ, ಪುರುಷ ಸದಸ್ಯರು ಅವರ ಮೇಲೆ ಮೇಲುಗೈ ಸಾಧಿಸಲು ಅವಕಾಶ ಕೊಟ್ಟಿತು. ಇದನ್ನು ಮನಗಂಡ ಮಹಿಳಾ ಸದಸ್ಯರು ತಮ್ಮದೇ ಆದ ವೇದಿಕೆಯ ಅವಶ್ಯಕತೆಯನ್ನು ಮನಗಂಡು, ಈ ವೇದಿಕೆಯಿಂದ ತಮ್ಮ ಹಕ್ಕು ಮತ್ತು ಆಸಕ್ತಿಗಳನ್ನು ಪ್ರತಿಪಾದಿಸಲು ಅಂತಹ ವೇದಿಕೆಯ ಸೃಷ್ಟಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಕಳೆದ ಕೆಲವು ವರ್ಷಗಳಲ್ಲಿ, ವಿಶೇಷವಾಗಿ ದಕ್ಷಿಣ ಭಾರತದಲ್ಲಿ ಹಲವಾರು ಜಾಲಬಂಧಗಳನ್ನು ಹಾಗೂ ಮಹಿಳಾ ಸಂಘಟನೆಗಳನ್ನು ರಚಿಸಲಾಯಿತು. ಈ ವೇದಿಕೆಗಳ ಮೂಲಕ ಪಿತೃಪ್ರಭುತ್ವವನ್ನು ಮತ್ತು ವಿರೋಧಿ ವಿಕೇಂದ್ರೀಕರಣ ವ್ಯವಸ್ಥೆಗಳಂತಹ ಪರಿಸರವನ್ನು ಸಂವಿಧಾನಬದ್ಧ ವ್ಯವಸ್ಥೆಯನ್ನಾಗಿ ಮಾರ್ಪಾಡು ಮಾಡುವ ಉದ್ದೇಶವಾಗಿತ್ತು. ಅದರಂತೆ, ಕರ್ನಾಟಕದಲ್ಲಿ ಸ್ತ್ರೀ ಸೂಚನಾ ಸಂಗಮ, ಮಹಿಳಾ ಸಾಮಖ್ಯ, ಗುಜರಾತಿನ ಮಹಿಳಾ ಸ್ವರಾಜ್ಯ ಅಭಿಯಾನ, ಕೇರಳದ ಸಖಿ ಸಂಸ್ಥೆಯ ಸಂಘಟನೆ, ತಮಿಳುನಾಡಿನ ಗಾಂಧಿ ಗ್ರಾಮ ಸಂಸ್ಥೆಯು ರಚಿಸಿದ ಸಂಘಟನೆಗಳು ಕೆಲವು ಉದಾಹರಣೆಗಳಾಗಿವೆ. ಈ ವೇದಿಕೆಯು ಮಹಿಳೆಯರ ಸಬಲೀಕರಣವಲ್ಲದೇ, ಪರಸ್ಪರ ಅನುಭವ ಹಂಚಿಕೆ, ಸಮಸ್ಯೆಗಳ ಕುರಿತು ವಕಾಲತ್ತು ಮಾಡುವುದು, ಇತ್ಯಾದಿ ಚಟುವಟಿಕೆಗಳಿಗೆ ಅನುವು ಮಾಡಿತು. ಚುನಾಯಿತ ಮಹಿಳಾ ಪ್ರತಿನಿಧಿಗಳು ತಮ್ಮ ಧ್ವನಿಯನ್ನು ಪ್ರತಿಪಾದಿಸಲು ಮತ್ತು ಸಮುದಾಯದ ಕುಂದುಕೊರತೆಗಳನ್ನು ನಿವಾರಿಸಲು ಈ ವೇದಿಕೆಯು ಸಹಕಾರಿಯಾಯಿತು.

**ಸುಗ್ರಾಮ – ಒಂದು ಕಿರು ಪರಿಚಯ :** ಸುಗ್ರಾಮ – ಗ್ರಾಮ ಪಂಚಾಯತ್ ಚುನಾಯಿತ ಮಹಿಳಾ ಪ್ರತಿನಿಧಿಗಳ ಸಂಘ – ಕರ್ನಾಟಕವನ್ನು, 2010ರಲ್ಲಿ ಸಂಘಗಳ ನೋಂದಣಿ ಕಾಯ್ದೆಯನ್ವಯ ನೋಂದಾಯಿಸಲ್ಪಡಲಾಗಿದ್ದು, ಕರ್ನಾಟಕದ ಗ್ರಾಮ ಪಂಚಾಯತಿಗಳ ಚುನಾಯಿತ ಮಹಿಳಾ ಪ್ರತಿನಿಧಿಗಳ ಹಕ್ಕು ಮತ್ತು ಆಸಕ್ತಿಯನ್ನು ಪ್ರತಿನಿಧಿಸುತ್ತಿರುವ ಒಂದು ಸಂಘ. ಚುನಾಯಿತ ಮಹಿಳಾ ಪ್ರತಿನಿಧಿಗಳು, ಉತ್ತಮ ನೀತಿಗಳನ್ನು ವಕಾಲತ್ತು ಮಾಡುವುದು ಮತ್ತು ಬದಲಾವಣೆಗಳನ್ನು ತರುವಲ್ಲಿ ಐಕ್ಯಮತದಿಂದ ಒಟ್ಟಾಗಿ ಧನಿಗೂಡಿಸಲು ಸುಗ್ರಾಮ ಒಂದು ವೇದಿಕೆಯಾಗಿದೆ.

ಸುಗ್ರಾಮವು ಸದಸ್ಯತ್ವ ಆಧಾರಿತ ಸಂಘವಾಗಿದೆ. ಪ್ರಸಕ್ತವಾಗಿ 17 ಜಿಲ್ಲೆಗಳ 51 ತಾಲ್ಲೂಕುಗಳಲ್ಲಿ ಸುಗ್ರಾಮದ ತಾಲ್ಲೂಕು ಸಂಘಗಳನ್ನು ರಚಿಸಲಾಗಿದ್ದು, 3000 ಚುನಾಯಿತ ಮಹಿಳಾ ಸದಸ್ಯರ ಸದಸ್ಯತ್ವವನ್ನು ಹೊಂದಿದೆ. ಉತ್ತಮ ಆಡಳಿತ ಮತ್ತು ಪ್ರಜಾಪ್ರಭುತ್ವವನ್ನು ಬಲಪಡಿಸುವಲ್ಲಿ ಪ್ರತಿನಿಧಿತ್ವವಷ್ಟೇ ಅಲ್ಲದೇ, ಸಕ್ರಿಯ ಮತ್ತು ಸಫಲ ನಾಯಕರಾಗಿ ಭಾಗವಹಿಸಲು ಸುಗ್ರಾಮದ ಸದಸ್ಯರು ಇತರ ಸದಸ್ಯರಿಗೆ ಸಹಕಾರ ನೀಡುತ್ತಿದ್ದಾರೆ. ಸದಸ್ಯರ ಸುಸ್ಥಿರ ಪ್ರಯತ್ನಗಳಿಂದ ಸುಗ್ರಾಮವು ಇಂದು ರಾಜ್ಯ ಮಟ್ಟದ ಸಂಘವಾಗಿ ಹೊರಹೊಮ್ಮಿದೆ. ಇದರಿಂದ, ಗ್ರಾಮ ಪಂಚಾಯತಿಯಲ್ಲಿನ ಚುನಾಯಿತ ಮಹಿಳಾ ಸದಸ್ಯರ ಸಂಘಟಿತ ಶಕ್ತಿಯನ್ನು ತೋರ್ಪಡಿಸುತ್ತದೆ. ಹಾಗೆಯೇ, ಚುನಾಯಿತ ಸದಸ್ಯರು ಸಮಾಜ ಪರಿವರ್ತಕರಾಗಿ ಮತ್ತು ಸ್ವಾವಲಂಬಿಗಳಾಗಿ, ಹಳ್ಳಿಯ/ಪಂಚಾಯತಿಯ ಸರ್ವಾಂಗೀಣ ಅಭಿವೃದ್ಧಿಗೆ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಸುಗ್ರಾಮದ ಸದಸ್ಯರು ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಯಶಸ್ವಿಯಾಗಿದ್ದು, ಸಮುದಾಯದಲ್ಲಿನ ಎಲ್ಲಾ ವರ್ಗದವರಿಗೂ ಸರ್ಕಾರದ ಯೋಜನೆಗಳು ದೊರಕುವಂತೆ

ಮಾಡುತ್ತಿದ್ದಾರೆ. ಹಾಗೆಯೇ, ಸರ್ಕಾರದ ಯೋಜನೆಗಳು ಸಮರ್ಪಕವಾಗಿ ಕಾರ್ಯಗತವಾಗಿಸುವಂತಹ ನಿಟ್ಟಿನಲ್ಲಿ ತೊಡಗಿಸಿಕೊಂಡಿದ್ದಾರೆ. ಇದಲ್ಲದೇ, ಸುಗ್ರಾಮದ ತಾಲ್ಲೂಕು ಸಭೆಗಳಲ್ಲಿ ತಮ್ಮ ಸವಾಲುಗಳನ್ನು ಮಂಡಿಸುತ್ತ, ಇತರ ಚುನಾಯಿತ ಮಹಿಳಾ ಸದಸ್ಯರ ಸಹಕಾರ ಹಾಗೂ ಬೆಂಬಲದೊಂದಿಗೆ ಐಕ್ಯಮತದಿಂದ ಧನಿಎತ್ತಿ ಸಮಸ್ಯೆಗಳನ್ನು ನಿವಾರಿಸುವಲ್ಲಿ ಯಶಸ್ವಿಯಾಗಿದ್ದಾರೆ.

**ಮುಂದಿನ ಹೆಜ್ಜೆ :** ಇತ್ತೀಚೆಗೆ ನಾಗರಿಕ ಸಮಾಜ ಸಂಸ್ಥೆಗಳು ಜನರ ಜೀವನದಲ್ಲಿ ಉತ್ತಮ ಪಾತ್ರವಹಿಸುತ್ತಿವೆ ಎನ್ನಲಾಗಿದೆ. ಇಂದು ನಾಗರಿಕ ಸಮಾಜ ಸಂಸ್ಥೆಗಳು ನಿಸ್ಸಂದೇಹವಾಗಿ ಪ್ರಮುಖ ಪಾತ್ರ ವಹಿಸುತ್ತಿವೆ ಎನ್ನಬಹುದು. ತಮ್ಮ ಸಂವೇದನಾಶೀಲ ಪ್ರಚೋದನೆಯ ಮೂಲಕ ಜನರ ಅಗತ್ಯತೆಗಳೆಡೆಗೆ ಹೆಚ್ಚು ಪ್ರತಿಕ್ರಿಯಿಸುತ್ತಿದ್ದು, ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸದೃಢ ಮಾಡುವ ನಿಟ್ಟಿನಲ್ಲಿ ಸಫಲವಾಗಿವೆ. ಗ್ರಾಮೀಣ ಮೂಲ ಸೌಕರ್ಯಗಳ ಬಲವರ್ಧನೆ ಮತ್ತು ಗ್ರಾಮೀಣ ಜನರ ಜೀವನ ಮಟ್ಟದ ಸುಧಾರಣೆ ಹಾಗೂ ಅದರಿಂದ ಯೋಜನೆಯಲ್ಲಿ ಹಾಗೂ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸಮುದಾಯ ಸಂಘಟನೆಗಳು ಪ್ರಮುಖ ಪಾತ್ರ ನಿರ್ವಹಿಸುತ್ತಿವೆ. ಸಮುದಾಯ ಸಂಘಟನೆಗಳು ಮಹಿಳಾ ಹಕ್ಕುಗಳು, ಮಾನವ ಹಕ್ಕುಗಳು ಮತ್ತು ಮಕ್ಕಳ ಹಕ್ಕುಗಳ ಮೂಲಕ ಸಮುದಾಯದವರು ತಮ್ಮ ಧ್ವನಿ ಮೂಡಿಸಲು ಮತ್ತು ತಮ್ಮ ಕುಂದುಕೊರತೆಗಳನ್ನು ನಿವಾರಿಸಲು ಅನುವು ಮಾಡುವ ಒಂದು ಚಳುವಳಿಯಾಗಿ ಹೊರಹೊಮ್ಮಿದೆ. ಸಾಮಾನ್ಯವಾಗಿ ಪಂಚಾಯತ್ ರಾಜ ವ್ಯವಸ್ಥೆಯ ಮೂರು ಹಂತದ ಸರ್ಕಾರಗಳ ಚಟುವಟಿಕೆಗಳಲ್ಲಿ ಮಧ್ಯಸ್ಥಿಕೆ ಮತ್ತು ಹಸ್ತಕ್ಷೇಪ ಮಾಡುತ್ತ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ತನ್ನ ಭದ್ರ ಬುನಾದಿಯನ್ನು ರಚಿಸಿದೆ ಎಂಬ ನಿಲುವಿದೆ.

ತಾತ್ವಿಕವಾಗಿ, ಸಮುದಾಯ ಸಂಘಟನೆಗಳು ಪ್ರತ್ಯೇಕ ಮತ್ತು ಸ್ವಾಯತ್ತತೆಯನ್ನು ಹೊಂದಿರುವಂತಹ ಸಂಘಟನೆಗಳಾಗಿರಬೇಕಿದ್ದು, ಸಮುದಾಯದವರಿಗೆ ಜಾಗೃತಿ ಮೂಡಿಸುವಂತೆ ಮಾಡಬೇಕಿದೆ. ಸ್ಥಳೀಯ ಸರ್ಕಾರಗಳು ಪಾರದರ್ಶಕವಾಗಿ, ಉತ್ತರದಾಯಿತ್ವವಿರುವಂತೆ ಮಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಒಂದು ಬಲಾಢ್ಯ ರಾಜ್ಯ ಸರ್ಕಾರ ಮತ್ತು ಬಲಾಢ್ಯ ಸಮುದಾಯ ಸಂಘಟನೆಗಳಿಂದ ಸಮುದಾಯದ ಸರ್ವಾಂಗೀಣ ಅಭಿವೃದ್ಧಿಯ ಕನಸನ್ನು ನನಸಾಗಿಸಬಹುದಾಗಿದೆ. ನಿಜವಾದ ಪ್ರಜಾಪ್ರಭುತ್ವ ಆಡಳಿತ ವಿಕೇಂದ್ರೀಕರಣದ ಮಹತ್ವ.

**ಶ್ರೀಮತಿ ಪದ್ಮಿನಿ ಅನಂತ್,** ನಿರ್ದೇಶಕರು, ಸುಗ್ರಾಮ – ಗ್ರಾಮ ಪಂಚಾಯತ್ ಚುನಾಯಿತ ಮಹಿಳಾ ಪ್ರತಿನಿಧಿಗಳ ಸಂಘ, ಕರ್ನಾಟಕ